## ದಿನಾಂಕ: 26/06/2013ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ದಿನಾಂಕ: 26/06/2013ರಂದು ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ಆಯೋಗದ ಎಲ್ಲಾ ಆಯುಕ್ತರುಗಳು ಮತ್ತು ಕಾನೂನು ಅಧಿಕಾರಿಗಳ ಸಭೆ ಕರೆದಿದ್ದು, ಸದರಿ ಸಭೆಯಲ್ಲಿ ಕೆಳಕಂಡವರು ಉಪಸ್ಥಿತರಿದ್ದರು.

1) ರಾಜ್ಯ ಮುಖ್ಯ ಮಾಹಿತಿ ಆಯುಕ್ತರು
2) ಎಲ್ಲಾ ರಾಜ್ಯ ಮಾಹಿತಿ ಆಯುಕ್ತರು
3) ಕಾರ್ಯದರ್ಶಿಗಳು
4) ಕಾನೂನು ಅಧಿಕಾರಿಗಳು
5) ಅಧೀನ ಕಾರ್ಯದರ್ಶಿ (ಪ್ರಭಾರ)
6) ಶಾಖಾಧಿಕಾರಿ

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**ವಿಷಯ 1: ಅಕ್ಟೋಬರ್ 2013ರಲ್ಲಿ ಕಾಲಾವಧಿ ಪೂರ್ಣಗೊಳಿಸುತ್ತಿರುವ ಆಯೋಗದ ಬೆಂಚಿಗೆ ಸಂಬಂಧಿಸಿದ ಪ್ರಕರಣಗಳನ್ನು ಬೇರೆ ಆಯುಕ್ತರಿಗೆ ಹಂಚಿಕೆ ಮಾಡುವ ಬಗ್ಗೆ.**

ಶ್ರೀ.ಜೆ.ಎಸ್.ವಿರೂಪಾಕ್ಷಯ್ಯ, ಮಾಹಿತಿ ಆಯುಕ್ತರು ದಿನಾಂಕ 22/10/2013ರಂದು ಅವರ ಅವಧಿ ಮುಕ್ತಾಯಗೊಳ್ಳುತ್ತಿದ್ದು, ಅವರ ನಂತರದ ಪ್ರಕರಣಗಳನ್ನು ಬೇರೆ ಆಯುಕ್ತರುಗಳಿಗೆ ಹಂಚಿಕೆ ಮಾಡುವ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಪ್ರಕರಣಗಳ ಪೈಕಿ ಮುಖ್ಯ ಆಯುಕ್ತರನ್ನು ಹೊರತುಪಡಿಸಿ ಉಳಿದ ನಾಲ್ಕು ಆಯುಕ್ತರಿಗೆ ತಲಾ ಐದು ಪ್ರಕರಣಗಳನ್ನು ಪ್ರತಿ ದಿನಕ್ಕೆ ಅವರುಗಳು ತಿಳಿಸಿರುವ ದಿನಗಳಿಗೆ, ಅವರುಗಳ ನ್ಯಾಯಾಲಯಕ್ಕೆ ಮುಂದೂಡಬಹುದೆಂದು ತೀರ್ಮಾನಿಸಲಾಯಿತು.

(ಕ್ರಮ: ಮಾನ್ಯ ಜೆ.ಎಸ್.ವಿರೂಪಾಕ್ಷಯ್ಯ ರವರು ಹಾಗೂ ಎಲ್ಲಾ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಕಾನೂನು ಅಧಿಕಾರಿ, ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿ)

**ವಿಷಯ 2: ಆಯೋಗದ ಆಯುಕ್ತರುಗಳು ಮಾಡುವ ಆದೇಶಗಳನ್ನು ಮೂಲ ಸಹಿಯೊಂದಿಗೆ ಮೂಲ ಮನವಿದಾರರು ಹಾಗೂ ಪ್ರತಿವಾದಿಗಳಿಗೆ ಕಳುಹಿಸಿಕೊಡುವ ಬಗ್ಗೆ.**

ಈ ಬಗ್ಗೆ ವಿವರವಾದ ಚರ್ಚೆ ನಂತರ ಆಯಾ ಆಯುಕ್ತರು ತಾವು ಅನುಮೋದಿಸಿದ ಆದೇಶಗಳ ಒಂದು ಶುದ್ಧ ಪ್ರತಿ ಹಾಗೂ ಕಛೇರಿ ಪ್ರತಿ ಸಹಿ ಮಾಡುವುದೆಂದು ಹಾಗೂ ನಂತರ ವಾದಿ, ಪ್ರತಿ ವಾದಿಗಳಿಗೆ ಕಳುಹಿಸುವಾಗ ಜೆರಾಕ್ಸ್ ಪ್ರತಿಗಳಿಗೆ ಆಯೋಗದ ಕಾನೂನು ಅಧಿಕಾರಿಯವರು ಕರ್ನಾಟಕ ಮಾಹಿತಿ ಹಕ್ಕು ನಿಯಮ 12 ರಂತೆ ದೃಢೀಕರಿಸಿ ಕಳುಹಿಸುವುದೆಂದು ತೀರ್ಮಾನಿಸಲಾಯಿತು.

(ಕ್ರಮ: ಎಲ್ಲಾ ಆಯುಕ್ತರ ಆಪ್ತ ಕಾರ್ಯದರ್ಶಿ, ಬೆಂಚ್ ಕ್ಲರ್ಕ್‌ಗಳು, ಅಧೀನ ಕಾರ್ಯದರ್ಶಿ, ಕಾನೂನು ಅಧಿಕಾರಿ ಮತ್ತು ಕಾರ್ಯದರ್ಶಿ)

**ವಿಷಯ 3: ಇತರೆ ವಿಷಯಗಳ ಬಗ್ಗೆ.**

ದಿನಾಂಕ 30/07/2011 ರಂದು KARNATAKA RIGHT TO INFORMATION FEDERATION, ಬೆಂಗಳೂರು ಇವರು ನೀಡಿರುವ ಅರ್ಜಿಯ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಚರ್ಚಿಸಿದನಂತರ ಈ ಅರ್ಜಿಯಲ್ಲಿನ ಅಂಶಗಳ ಬಗ್ಗೆ ಈಗಾಗಲೆ ಆಗಿರುವ ಸುಧಾರಣೆಗಳು/ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅರ್ಜಿದಾರರಿಗೆ ತಿಳಿಸಲು ಹಾಗೂ ಉಳಿದ ವಿಷಯಗಳ ಬಗ್ಗೆ ಸರಕಾರದ ಗಮನಕ್ಕೆ ತರುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

(ಕ್ರಮ: ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ)

**ವಿಷಯ 4: ಆಯೋಗದ ಸದಸ್ಯರ ವಿರುದ್ಧ ಬರುವ ದೂರು ಅರ್ಜಿಗಳಿಗೆ ಉತ್ತರ ನೀಡುವ ಬಗ್ಗೆ.**

ಈ ವಿಷಯದ ಬಗ್ಗೆ ಶ್ರೀ ವಿರೂಪಾಕ್ಷಯ್ಯ, ಆಯುಕ್ತರು, ಪ್ರಸ್ತಾಪಿಸಿ ಈ ರೀತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರು ಅಥವಾ ರಾಜ್ಯ ಮಾಹಿತಿ ಆಯುಕ್ತರ ವಿರುದ್ಧ ಬರುವ ದೂರು ಅರ್ಜಿಗಳ ಬಗ್ಗೆ, ಈ ಅರ್ಜಿಗಳನ್ನು ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಸಂಬಂಧಪಟ್ಟ ಆಯುಕ್ತರ ಗಮನಕ್ಕೆ ತಂದು, ಇಂತಹ ಅರ್ಜಿಗಳಲ್ಲಿ ಮಾನ್ಯ ರಾಜ್ಯಪಾಲರು ಕ್ರಮ ಜರುಗಿಸಬೇಕಾಗಿದ್ದು, ನಮ್ಮ ಹಂತದಲ್ಲಿ ಯಾವುದೇ ಕ್ರಮ ಅಗತ್ಯವಿರುವುದಿಲ್ಲದ ಕಾರಣ ಅರ್ಜಿದಾರರಿಗೆ ಅದೇರೀತಿ ಸೂಕ್ತ ಹಿಂಬರಹ ನೀಡಲು ತೀರ್ಮಾನಿಸಲಾಯಿತು.

(ಕ್ರಮ: ಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಶಾಖಾಧಿಕಾರಿ ಹಾಗೂ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ)

**ವಿಷಯ 5:** ದಿನಾಂಕ 13/06/2013ರ ಸಭೆ ನಡವಳಿಗಳಲ್ಲಿನ ವಿಷಯ 3ರಲ್ಲಿ "ಟೆಂಡರ್ ಸ್ವೀಕರಿಸುವ ಸಮಿತಿ ಸದಸ್ಯರುಗಳು", ಎಂಬುದನ್ನು "ಟೆಂಡರ್ ಅಂಗೀಕರಿಸುವ ಸಮಿತಿ" ಸದಸ್ಯರು ಎಂದು ತಿದ್ದುಪಡಿ ಮಾಡಲು ಅನುಮೋದಿಸಲಾಯಿತು.

ಮುಖ್ಯ ಮಾಹಿತಿ ಆಯುಕ್ತರು.